# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

**ಎಸ್‌ಸಿ. 251/2021**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಮಹದೇವಸ್ವಾಮಿ | | *ಪ್ರಮಾಣ ಮಾಡಿಸಿದ ದಿನಾಂಕಃ* |
| **ತಂದೆ/ಗಂಡನ ಹೆಸರು** | ಃ ಶ್ರೀ ಮಹದೇವಪ್ಪ | | **15.04.2024** |
| **ವಯಸ್ಸು** | ಃ **40 ವರ್ಷ** | | |
| **ವೃತ್ತಿ** | ಃ ವ್ಯವಸಾಯ | | **ಪ್ರಾ.ಸಾ. ಃ 07** |
| **ವಾಸಸ್ಥಳ** | ಃ ಗೌಡರಹುಂಡಿ | | **ಚಾ.ಸಾ. ಃ 03** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಮೃತ ಶಿವರಾಜಪ್ಪ ಇವರ ಪರಿಚಯ ಇದೆ. *2021* ನೇ ವರ್ಷದಲ್ಲಿ ಒಂದು ದಿನ ಬಿದಿರುಗೂಡು ಪಂಪ್ ಹೌಸ್ ಬಳಿ ಇರುವ ರಾಮಪುರ ನಾಲೆಯಲ್ಲಿ ಶಿವರಾಜಪ್ಪನ ಶವ ದೊರತಿತ್ತು. ಆ ಕಾಲಕ್ಕೆ ಶವ ಊದಿಕೊಂಡು ಮತ್ತು ಅಂರ್ದ ಬಂರ್ದ ಕೊಳೆತಿತ್ತು. ಶವದ ಮೇಲೆ ಪಟಾಪಟಿ ಚಡ್ಡಿ ಮಾತ್ರ ಇತ್ತು. ಆ ಕಾಲಕ್ಕೆ ಶವವನ್ನು ನಾಲೆಯಿಂದ ತೆಗೆದು ಬದಿಗೆ ಹಾಕಿದ್ದರು. ಆಗ ಶಿವರಾಜಪ್ಪನ ಮಗ ಶವವನ್ನು ಗುರುತಿಸಿದ್ದ. ಶವ ದೊರೆತ ಸ್ಥಳದಲ್ಲಿ ಸಂಜೆ *6.30* ರಿಂದ *8.30* ರವರೆಗೆ ಮಹಜರ್ ಬರೆದು ನನ್ನ ಸಹಿ ಪಡೆದಿದ್ದರು. ಆ ಕಾಲಕ್ಕೆ ಟಾರ್ಚ್ ಮತ್ತು ಪೋಲೀಸ್ ಜೀಪ್ ಲೈಟ್ ನ ಬೆಳಕಿನಲ್ಲಿ ಮಹಜರ್ ಬರೆದಿದ್ದರು. ಆ ಕಾಲಕ್ಕೆ ಶಿವರಾಜಪ್ಪನ ತಲೆಗೆ ಮತ್ತು ಹಿಮ್ಮಡಿಗಳಿಗೆ ಗಾಯವಾಗಿತ್ತು. ಶವ ದೊರೆತ ಸ್ಥಳದಲ್ಲಿ ಪೋಲೀಸರು ಒಂದು ಬಾಟಲ್ ನೀರನ್ನು ವಶಕ್ಕೆ ಪಡೆದಿದ್ದರು. ಈಗ ನಾನು ನೋಡುತ್ತಿರುವ ನಿ.ಪಿ-*3* ಮಹಜರ್ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಸಹಿಯನ್ನು ನಿ.ಪಿ-*3(ಸಿ)* ಎಂದು ಗುರುತಿಸಿದೆ. ಆ

ಮಹಜರ್ ಕಾಲಕ್ಕೆ ನಾನು, ಸೋಮಣ್ಣ, ಗಿರಿಯಯ್ಯ, ಪವನ್ ಕುಮಾರ್ ಹಾಜರಿದ್ದೆವು. ನಿ.ಪಿ.3 ಅನ್ನು ಬರೆದ ಬಳಿಕ ಓದಿ ಹೇಳಿ ನನ್ನ ಸಹಿ ಪಡೆದಿದ್ದರು.

ಪಾಟೀ ಸವಾಲು ಃ 1 ನೇ ಆರೋಪಿ ಪರ ವಕೀಲರಾದ ಶ್ರೀ ಸಿ.ಎಂ.ಜೆ ರವರಿಂದಃ-

*2.* ಶಿವರಾಜಪ್ಪನ ದೇಹದ ಮೇಲೆ ಇದ್ದ ನಿಕ್ಕರ್ ಗೆ ಕೆಸರು ಹತ್ತಿತ್ತು ಎಂದರೆ ಸರಿಯಲ್ಲ. ರಾಮಪುರ ನಾಲೆ ಹಳ್ಳಿಗಳ ಮೂಲಕ ಹೋಗುತ್ತದೆ ಎಂದರೆ ನಿಜ. ಆ ನಾಲೆಯಲ್ಲಿ ಗ್ರಾಮದ ಜನರು ಬಟ್ಟೆ ಒಗೆಯುವುದು ಮತ್ತು ದನ ಕರು ತೊಳೆಯುವುದು ಮಾಡುತ್ತಾರೆ ಎಂದರೆ ನಿಜ. ಗೌಡರಹುಂಡಿ ಬಳಿಕ ಕೆಂಬಾಲು ಗ್ರಾಮ ನಂತರ ಬಿದಿರುಗೂಡು ಗ್ರಾಮ ಸಿಗುತ್ತದೆ. ನಮ್ಮ ಗ್ರಾಮದಿಂದ ಶವ ದೊರೆತ ಸ್ಥಳ *4-5* ಕಿ.ಮೀ ದೂರವಿದೆ. ನಾನು ಅಲ್ಲಿ ಶವ ಇದ್ದ ಬಗ್ಗೆ ಪೋಲೀಸರಿಗೆ ಹೇಳಿಲ್ಲ. ಪಂಪ್ ಹೌಸ್ ನಲ್ಲಿ ಕೆಲಸ ಮಾಡುವ ಜನರು ಅಲ್ಲಿ ಶವ ಇದ್ದ ಬಗ್ಗೆ ಮಾಹಿತಿ ಕೊಟ್ಟಿದ್ದರು. ಶವ ಊದಿಕೊಂಡಿದ್ದರಿಂದ ಗುರುತಿಸಲು ಆಗದ ಸ್ಥಿತಿಯಲ್ಲಿತ್ತು ಎಂದರೆ ಸರಿಯಲ್ಲ. ನಾನು ಆ ಸ್ಥಳಕ್ಕೇ ಹೋಗೇ ಇಲ್ಲ ಎಂದರೆ ಸರಿಯಲ್ಲ. ಪೋ.ಠಾಣೆಯಲ್ಲಿ ಮಹಜರ್ ಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**3 ನೇ ಆರೋಪಿತನ ಪರ ವಕೀಲರು ಈ ಮೇಲಿನಂತೆ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.**
**2 ನೇ ಆರೋಪಿತನ ಪರ ವಕೀಲರು ಗೈರು ಹಾಜರಿದ್ದು ಅವರ ಪರ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

ಮರು ವಿಚಾರಣೆಃ- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು